**ಸಮಗ್ರ ಶಿಕ್ಷಣ-ಕರ್ನಾಟಕ**

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಕೆ.ಆರ್.ಸರ್ಕಲ್, ನೃಪತುಂಗ ರಸ್ತೆ, ಬೆಂಗಳೂರು-01**

ಸಂ.:ಸಶಿಕ/ಆಚ2/ಭಾ.ಸಂ.ಪ್ರ.ಅಪ್ಲೋಡ್/2019-20 ದಿನಾಂಕ: 10.12.2019

**ಸುತ್ತೋಲೆ**

ವಿಷಯ: ಶಾಲೆಗಳಲ್ಲಿ ಭಾರತ ಸಂವಿಧಾನದ ಪೀಠಿಕೆಯನ್ನು ತೂಗು ಹಾಕುವ ಕುರಿತು.
ಉಲ್ಲೇಖ: ಸಶಿಕ/ಕೆಪಿಎಸ್/ಭಾ.ಸಂ.ಪ್ರ.ಅಪ್ಲೋಡ್/2019-2020.

---

ಉಲ್ಲೇಖಿತ ವಿಷಯಕ್ಕೆ ಸಂಬಂಧಿಸಿದಂತೆ ಭಾರತ ಸಂವಿಧಾನದ ಪೀಠಿಕೆ(ಪ್ರಸ್ತಾವನೆ)ಯನ್ನು ಶಿಕ್ಷಣ ಇಲಾಖೆಯ www.schooleducation.kar.nic.in ವೆಬ್‌ಸೈಟ್‌ನಲ್ಲಿ ಈಗಾಗಲೇ ಅಪ್‌ಲೋಡ್ ಮಾಡಲಾಗಿದೆ. ಶಾಲೆಗಳಲ್ಲಿರುವ ರಾಷ್ಟ್ರನಾಯಕರ ಫೋಟೋಗಳೊಂದಿಗೆ **"ಭಾರತ ಸಂವಿಧಾನದ ಪೀಠಿಕೆ"** ಯ ವಿನ್ಯಾಸದ ಫೋಟೋವನ್ನು ಸೂಕ್ತ ಅಳತೆಗೆ ಹೊಂದಿಸಿ, ಶಾಲಾ ಮುಖ್ಯಸ್ಥರ ಕಛೇರಿಯಲ್ಲಿ ತೂಗು ಹಾಕಲು ಶಾಲಾ ಮುಖ್ಯಸ್ಥರಿಗೆ ಸೂಚಿಸಿದೆ. ಸಂವಿಧಾನ ಪೀಠಿಕೆಯ ಮಾದರಿಯನ್ನು www.schooleducation.kar.nic.in ವೆಬ್‌ಸೈಟ್‌ನಲ್ಲಿ ನೀಡಿರುವಂತೆ download ಮಾಡಿಕೊಂಡು ಪ್ರಿಂಟ್ ಹಾಕಿಸಿ, ತೂಗುಹಾಕಲು ಸೂಚಿಸಿದೆ. ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರು ತಮ್ಮ ಜಿಲ್ಲಾ ವ್ಯಾಪ್ತಿಗೆ ಬರುವ ಎಲ್ಲಾ ಶಾಲೆಗಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ತುರ್ತು ಅನುಷ್ಠಾನಗೊಳ್ಳುವಂತೆ ಮಾರ್ಗದರ್ಶನ ನೀಡಿ, ಸೂಕ್ತ ಕ್ರಮ ಕೈಗೊಂಡು, ಈ ಬಗ್ಗೆ ವರದಿಯನ್ನು ರಾಜ್ಯ ಕಛೇರಿಗೆ sskrs2019@gmail.com ಇ-ಮೇಲ್‌ಗೆ ಕಳುಹಿಸುವುದು.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ
10/12/19

**ಅಗತ್ಯ ಕ್ರಮಕ್ಕಾಗಿ**

1. ಉಪನಿರ್ದೇಶಕರು (ಆಡಳಿತ), ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಅಭಿಯಾನ, ಎಲ್ಲಾ ಜಿಲ್ಲೆಗಳು
2. ಉಪನಿರ್ದೇಶಕರು (ಅಭಿವೃದ್ಧಿ), ಎಲ್ಲಾ ಜಿಲ್ಲೆಗಳು
3. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಎಲ್ಲಾ ವಲಯಗಳು

**ಮಾಹಿತಿಗಾಗಿ:**

4. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ & ಪ್ರೌಢ ಶಿಕ್ಷಣ, ಬಹುಮಹಡಿ ಕಟ್ಟಡ, ಬೆಂಗಳೂರು, ಇವರಿಗೆ ಗೌರವಗಳೊಂದಿಗೆ.
5. ಮಾನ್ಯ ಆಯುಕ್ತರು, ಸಾಶಿಇ, ನೃಪತುಂಗ ರಸ್ತೆ, ಬೆಂಗಳೂರು
6. ಅಪರ ಆಯುಕ್ತರು, ಸಾಶಿಇ, ಬೆಳಗಾವಿ ಮತ್ತು ಕಲಬುರ್ಗಿ